


ಹೊರಗಡೆ ಪೊಲೀಸ್ ವಾಹನದ ಸೈರನ್ ಕೇಳಿದೊಡನೆ ಮನೆಯೊಳಗಿದ್ದ ಏಳೂ ಜನ ಎದ್ದು ನಿಂತರು. ಅವರ ಮುಖದಲ್ಲಿ ಭಯ, ಗಾಬರಿ ಅಡಗಿತ್ತು. ಅದು ಸಹಜವೇ. ಆ ಮನೆಯಲ್ಲಿ ಒಂದು ಅಸಹಜ ಸಾವು ಆಗಿತ್ತು. ಒಂದೇ ಕ್ಷಣದಲ್ಲಿ ಮನೆಯೊಳಗಡೆ ಆರು ಜನ ಪಿ ಸಿ ಗಳು ಮತ್ತು ಇಬ್ಬರು ಒಂದು ಬಾಕ್ಸ್ ಹಿಡಿದುಕೊಂಡು ಒಳ ಬಂದರು. ಅವರ ಹಿಂದೆಯೇ ಸುಮಾರು ಐವತ್ತೈದು ವರ್ಷ ಆಸುಪಾಸಿನ ಇನ್‌ಸ್ಪೆಕ್ಟರ್ ನಾಗರಾಜಯ್ಯ ಒಳಬಂದ.

ದಪ್ಪ ಹೊಟ್ಟೆ, ಕೈಯಲ್ಲೊಂದು ಕೋಲು ಹಿಡಿದು ನಿಧಾನವಾಗಿ ಬೇಕೋ ಬೇಡವೋ ಎಂಬಂತೆ ಒಳಬಂದ. ಅವನ ಮುಖದಲ್ಲಿ ಅಸಹಜ ಸಾವಿನ ವಿಚಾರಣೆಯ ಅವಸರ ಇರಲಿಲ್ಲ. ಅದರ ಬದಲು ಯಾಕಪ್ಪ ಇಲ್ಲಿ ಬಂದೆ ಎನ್ನುವ ಅಸಡ್ಡೆ ಕಾಣುತ್ತಿತ್ತು

"ಯಾರು ನಮಗೆ ಫೋನ್ ಮಾಡಿದ್ದು" ಎಂದು ಅಲ್ಲಿದ್ದ ಎಲ್ಲರನ್ನೊಮ್ಮೆ ನೋಡಿ ಕೇಳಿದ.

"ಸರ್, ನಾನೆ ಫೋನ್ ಮಾಡಿದ್ದು. ನನ್ನ ಹೆಸರು ಸುನೀಲ್. ಮೃತರಾದವರು ನನಗೆ ದೊಡ್ಡಪ್ಪ ಆಗಬೇಕು'' ಎಂದು ಅಲ್ಲಿದ್ದ ಒಬ್ಬ ಸುಮಾರು ಮೂವತ್ತರ ಯುವಕ ಮುಂದೆ ಬಂದು ಹೇಳಿದ.

''ಸರ್, ನಾನು ರಜನಿ. ನಮ್ಮ ಮಾವ ಬೆಳಗ್ಗೆಯೇ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಅವರ ಕೈಯಲ್ಲಿ ಪಿಸ್ತೂಲ್ ಇತ್ತು. ಗುಂಡು ಹೊಡೆದುಕೊಂಡು ಸತ್ತಿದ್ದಾರೆ" ಎಂದು ಅಲ್ಲಿದ್ದ ಒಬ್ಬ ಮಧ್ಯ ವಯಸ್ಸಿನ ಮಹಿಳೆ ಅವನೆಡೆ ತೀಕ್ಷ್ಣವಾಗಿ ನೋಡುತ್ತಾ ನುಡಿದಳು.